10. ಹೊಸ ನರೇಂದ್ರ (ಕೂಡಿಗಿ) ದಲ್ಲಿ 765/400 ಕೆ.ವಿ. 3000 ಎಂ.ವಿ.ಎ. ವಿದ್ಯುತ್ ಪ್ರಸರಣ ಕೇಂದ್ರ.
11. ರಾಯಚೂರಿನಲ್ಲಿ 765/400 ಕೆ.ವಿ. ವಿದ್ಯುತ್ ಕೇಂದ್ರ.
12. ಮಧುಗಿರಿ (ತುಮಕೂರು) ಯಲ್ಲಿ 765/400 ಕೆ.ವಿ. 3000 ಎಂ.ವಿ.ಎ. ವಿದ್ಯುತ್ ಕೇಂದ್ರ.

ಅಲ್ಲದೇ 400/220 ಕೆ.ವಿ. ಪ್ರಸರಣ ಕೇಂದ್ರಗಳಲ್ಲಿ ಮೆ: ಪಿ.ಜಿ. ಸಿ.ಎಲ್. ರವರು ಬಿಡದಿ ಹಾಗೂ ಯಲಹಂಕಗಳಲ್ಲಿ ನಿರ್ಮಿಸುತ್ತಿದ್ದು, ಈ ಕೇಂದ್ರಗಳು ಸಧ್ಯದಲ್ಲಿಯೇ ಪೂರ್ಣಗೊಳ್ಳುವ ಸಾಧ್ಯತೆಯಿದೆ.

ರಾಯಚೂರಿನಲ್ಲಿರುವ ಶಾಖೋತ್ಪನ್ನ ವಿದ್ಯುತ್ ಘಟಕಗಳು

218 (71) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ರಾಯಚೂರಿನಲ್ಲಿರುವ ಶಾಖೋತ್ಪನ್ನ ವಿದ್ಯುತ್ ಘಟಕಗಳ ಸಂಖ್ಯೆ ಎಷ್ಟು;

ಆ) ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹಾಗೂ ನಿಷ್ಕ್ರಿಯವಾಗಿರುವ ವಿದ್ಯುತ್ ಘಟಕಗಳ ಸಂಖ್ಯೆ ಎಷ್ಟು;–

ಇ) ಕಳೆದ 3 ವರ್ಷಗಳಿಂದ ರಾಯಚೂರು ಶಾಖೋತ್ಪನ್ನ ಘಟಕಗಳಿಂದ ಉತ್ಪತ್ತಿಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು; (ವರ್ಷಾವಾರು ವಿವರಗಳನ್ನು ನೀಡುವುದು)

ಈ) ಕಳೆದ ಮೂರು ವರ್ಷಗಳಿಂದ ಕಾರ್ಯಾರಂಭ ಮಾಡದೇ ಸ್ಥಗಿತಗೊಂಡಿರುವ ವಿದ್ಯುತ್ ಘಟಕಗಳ ಸಂಖ್ಯೆ ಎಷ್ಟು ಮತ್ತು ಹಾಗೆ ಸ್ಥಗಿತಗೊಳ್ಳಲು ಕಾರಣಗಳೇನು;

ಉ) ಕಳೆದ ಮೂರು ವರ್ಷಗಳಿಂದ ವಿದ್ಯುತ್ ಘಟಕಗಳು ಸ್ಥಗಿತಗೊಂಡಿದ್ದರೂ ಸಹ ಇದುವರೆವಿಗೂ ದುರಸ್ತಿಪಡಿಸದೇ ಇರಲು ಕಾರಣಗಳೇನು;

ಊ) ಈ ವಿದ್ಯುತ್ ಘಟಕಗಳನ್ನು ದುರಸ್ತಿಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಋ) ಒಂದು ವಿದ್ಯುತ್ ಘಟಕವು ದುರಸ್ತಿಯಾದರೆ ಅದನ್ನು ಸರಿಪಡಿಸಲು ತಗಲುವ ವೆಚ್ಚವೆಷ್ಟು; ಕಳೆದ ಮೂರು ವರ್ಷಗಳ ಪೂರ್ಣ ವಿವರಗಳನ್ನು ನೀಡುವುದು?

ಶೋಭಾ ಕರಂದ್ಲಾಜೆ (ಇಂಧನ ಸಚಿವರು) ;–

ಅ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಒಟ್ಟು 8 ಘಟಕಗಳಿದ್ದು, ಅವುಗಳಲ್ಲಿ ಪ್ರತಿ 210 ಮೆ.ವ್ಯಾ. ಸಾಮರ್ಥ್ಯದ 7 ಘಟಕಗಳು ಹಾಗೂ 250 ಮೆ.ವ್ಯಾ ಸಾಮರ್ಥ್ಯದ 1 ಘಟಕವನ್ನು ಹೊಂದಿರುತ್ತದೆ.

ಆ) ಪ್ರಸ್ತುತ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಎಲ್ಲಾ 8 ಘಟಕಗಳೂ ಸುಸ್ಥಿತಿಯಲ್ಲಿದ್ದು, ವಿದ್ಯುತ್ ಉತ್ಪಾದಿಸುತ್ತಿವೆ.

ಇ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದ ಕಳೆದ ಮೂರು ವರ್ಷಗಳಲ್ಲಿ ಉತ್ಪಾದಿಸಲಾದ ವಿದ್ಯುತ್ತಿನ ವಿವರ ಈ ಕೆಳಕಂಡಂತಿದೆ.

ವರ್ಷ	ವಿದ್ಯುತ್ ಉತ್ಪಾದನೆ (ದ.ಲ.ಯೂ. ಗಳಲ್ಲಿ)
2009–10	10402.10
2010–11	8803.27
2011–12	9436.37

(29.02.2012ರ ವರೆಗೆ)

ಈ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಯಾವುದೇ ಘಟಕವೂ ಕಳೆದ ಮೂರು ವರ್ಷಗಳಿಂದ ಸತತವಾಗಿ ಸ್ಥಗಿತಗೊಂಡಿರುವುದಿಲ್ಲ. ಆದಾಗ್ಯೂ, ತಾಂತ್ರಿಕ ತೊಂದರೆಗಳು, ವಾರ್ಷಿಕ ನಿರ್ವಹಣೆ ಹಾಗೂ ಇನ್ನಿತರ ಕಾರಣಗಳಿಂದಾಗಿ ಕೆಲವು ಸಂದರ್ಭಗಳಲ್ಲಿ

ಘಟಕಗಳು ನಿಲುಗಡೆಯಾಗುತ್ತಿರುತ್ತವೆ. ಅಂತಹ ಘಟಕಗಳನ್ನು ಕೂಡಲೇ ದುರಸ್ತಿಗೊಳಿಸಿ ವಿದ್ಯುತ್ ಉತ್ಪಾದನೆಗೆ ತೊಡಗಿಸಲಾಗುತ್ತಿದೆ.

ಊ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಯಾವುದೇ ಘಟಕವೂ ಕಳೆದ ಮೂರು ವರ್ಷಗಳಿಂದ ಸತತವಾಗಿ ಸ್ಥಗಿತಗೊಂಡಿರುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ಋ) ಘಟಕದ ದುರಸ್ಥಿಗೆ ತಗಲುವ ವೆಚ್ಚವು ದುರಸ್ಥಿಯ ಸ್ವರೂಪವನ್ನು ಅವಲಂಬಿಸಿದ್ದು, ಈ ವೆಚ್ಚವು ಪ್ರತಿ ಸಂದರ್ಭದಲ್ಲಿಯೂ ಘಟಕದಿಂದ ಘಟಕಕ್ಕೆ ಬೇರೆ ಬೇರೆಯಾಗಿರುತ್ತದೆ.

ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿನ ಘಟಕಗಳ ಚಾಲನೆ ಹಾಗೂ ನಿರ್ವಹಣೆಗಾಗಿ 2008-09, 2009-10 ಹಾಗೂ 2010-11ನೇ ಸಾಲಿನಲ್ಲಿ ಕ್ರಮವಾಗಿ ಒಟ್ಟು 52.46 ಕೋಟಿ ರೂ.ಗಳು, 59.64 ಕೋಟಿ ರೂ.ಗಳು ಹಾಗೂ 85.56 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಗ್ರಾಮೀಣಾ ಭಾಗದಲ್ಲಿ 3 ಫೇಸ್ ವಿದ್ಯುತ್ ವಿತರಣೆ

198 (335) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;-

ಅ) ರಾಜ್ಯಾದ್ಯಂತ ಗ್ರಾಮೀಣ ಭಾಗದಲ್ಲಿ ಮೂರು ಫೇಸ್ ವಿದ್ಯುತ್ ನೀಡಲು ಸರ್ಕಾರ ನಿಗದಿಪಡಿಸಿರುವ ಸಮಯವೆಷ್ಟು;

ಆ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಮೂರು ಫೇಸ್ ವಿದ್ಯುತ್ತನ್ನು ಎಷ್ಟು ಗಂಟೆಗಳ ಕಾಲ ಒದಗಿಸುತ್ತಿದೆ, ಅಂಕಿ ಅಂಶಗಳ ವಿವರ ನೀಡುವುದು;

ಇ) ಬೀದರ್ ಜಿಲ್ಲೆಯ ಭಾಲ್ಕಿ, ಔರಾದ್, ಹುಮ್ನಾಬಾದ್ ತಾಲ್ಲೂಕುಗಳಲ್ಲಿ ಅತೀ ಕಡಿಮೆ ಅವಧಿಯ ಮೂರು ಫೇಸ್ ವಿದ್ಯುತ್ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;